ಸಮಾಚಾರ ಸಣ್ಣದಲ್ಲ

ಕಿರುಕುಳ ಆರೋಪ: ರಿಜಿಸ್ಟ್ರಾರ್ ಬಂಧನ

ಬೆಂಗಳೂರು: ಮಹಿಳಾ ಸಹೋದ್ಯೋಗಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ರಾಜ್ಯ ನರ್ಸಿಂಗ್ ಕೌನ್ಸಿಲ್ ಕಚೇರಿಯ ರಿಜಿಸ್ಟ್ರಾರ್ ಡಾ.ಮಲ್ಲು ಎಂಬವರನ್ನು ನಗರದ ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗಾಂಧಿನಗರದಲ್ಲಿರುವ ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯೊಬ್ಬರು, ಡಾ.ಮಲ್ಲು ತಮ್ಮೊಂದಿಗೆ ಅಸಭ್ಯವಾಗಿ ವರ್ತಿಸುವ ಮೂಲಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಮಾ.26ರಂದು ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ವಿಚಾರಣೆಗೆ ಹಾಜರಾಗುವಂತೆ ಆರೋಪಿಗೆ ನೋಟಿಸ್ ನೀಡಿದರೂ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದಿದ್ದಾಗ ಮಂಗಳವಾರ ಅವರನ್ನು ವಶಕ್ಕೆ ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಬೆಂಗಳೂರು ಪಶ್ಚಿಮ ವಿಭಾಗದ ಡಿಸಿಪಿ ಯತೀಶ್ ಮಾಹಿತಿ ನೀಡಿದ್ದಾರೆ.

ರಾಷ್ಟ್ರೀಯ ವಿಚಾರ ಸಂಕಿರಣ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಆಯೋಜಿಸಲಾಗಿದ್ದ ಕವಿ ಜಿ.ಎಸ್. ಶಿವರುದ್ರಪ್ಪ ಅವರ ಕುರಿತು ನಡೆಯಬೇಕಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಮುಂದೂಡಲಾಗಿದೆ. ಮೊದಲು ಏ. 6 ಮತ್ತು 7ರಂದು ನಡೆಯಬೇಕಿದ್ದ ಈ ವಿಚಾರ ಸಂಕಿರಣ ವನ್ನು ಏ. 15, 16ಕ್ಕೆ ನಡೆಸಲು ನಿರ್ಧರಿಸಲಾಗಿದೆ. ಈ ಕಾರ್ಯಕ್ರಮವನ್ನುಶಂಕರಘಟ್ಟದ ಕನ್ನಡ ಭಾರತಿ ಮತ್ತು ಕುವೆಂಪು ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿಯಲ್ಲಿ ಆಯೋಜಿಸಲಾಗುತ್ತಿದೆ. ಸಾಹಿತ್ಯಾಸಕ್ತರಿಗೆ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ತಮ್ಮ ಲೇಖನಗಳನ್ನು ಮಂಡಿಸಲು ಅವಕಾಶ ಕಲ್ಪಿಸಲಾಗಿದೆ.

80 ಲಕ್ಷ ವೇತನದ ಕೆಲಸ ಕಳೆದುಕೊಂಡ ಟೆಕ್ಕಿ ಸಾವಿಗೆ ಶರಣು | ಪತ್ನಿಯೂ ಆತ್ಮಹತ್ಯೆ

ದಂಪತಿ ಜೀವ ನುಂಗಿದ ಎಐ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೊತ್ತನೂರು ಠಾಣಾ ವ್ಯಾಪ್ತಿಯ ಖಾಸಗಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮಂಗಳವಾರ ಬೆಳಗ್ಗೆ ತೆಲಂಗಾಣ ಮೂಲದ ಟೆಕ್ಕಿ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿತ್ತು. ಪ್ರಾಥಮಿಕವಾಗಿ ಕೌಟುಂಬಿಕ ಕಲಹ ಹಿನ್ನೆಲೆ ಗಂಡ-ಹೆಂಡತಿ ಇಬ್ಬರೂ ಈ ನಿರ್ಧಾರ ತೆಗೆದುಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿತ್ತು. ಆದರೆ ಟೆಕ್ಕಿ ಸಾವಿಗೆ ನಿಜವಾದ ಕಾರಣ ಈಗ ಬಯಲಾಗಿದೆ. ಕೃತಕ ಬುದ್ಧಿಮತ್ತೆ (ಎಐ) ಹೊಡೆತಕ್ಕೆ ಕೆಲಸ ಕಳೆದುಕೊಂಡಿದ್ದ ಭಾನು ಚಂದರ್ ರೆಡ್ಡಿ, ಖಿನ್ನತೆಯಿಂದ ನೇಣಿಗೆ ಶರಣಾಗಿದ್ದಾರೆ ಎಂದು ತಿಳಿದು ಬಂದಿದೆ.

ತೆಲಂಗಾಣ ಮೂಲದ 32 ವರ್ಷದ ಭಾನು ಚಂದರ್ ರೆಡ್ಡಿ ಕುಂಟಾ ಮತ್ತು ಪತ್ನಿ ಬಿಬಿ ಶಾಜಿಯಾ ಸಿರಾಜ್ (31) ಎರಡು ವರ್ಷಗಳ ಹಿಂದೆ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಆದರೆ ಅವರ ಅಂತರ್ ಧರ್ಮೀಯ ವಿವಾಹದ ಬಗ್ಗೆ ಶಾಜಿಯಾ ಕುಟುಂಬಕ್ಕೆ ತಿಳಿದೇ ಇರಲಿಲ್ಲ ಎಂದು ತನಿಖೆ ವೇಳೆ ಗೊತ್ತಾಗಿದೆ. ಹೀಗಾಗಿಯೇ ತೆಲಂಗಾಣದಲ್ಲಿ ಸಮಸ್ಯೆ ಆಗಿರಬಹುದು. ಅದಕ್ಕಾಗಿಯೇ 8 ತಿಂಗಳ ಹಿಂದೆ ದಂಪತಿ ಬೆಂಗಳೂರಿಗೆ ಬಂದು ನೆಲೆಸಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದಲ್ಲಿ ವರ್ಷಕ್ಕೆ 80 ಲಕ್ಷ ರು. ಪ್ಯಾಕೇಜ್: ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದ ಭಾನು ಚಂದರ್ ರೆಡ್ಡಿ ವರ್ಷಕ್ಕೆ ಸುಮಾರು 80 ಲಕ್ಷ ರು. ಸಂಬಳ ಪಡೆಯುತ್ತಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ. ಆತನ ಕುಟುಂಬ ಹೇಳುವಂತೆ ಅಮೆರಿಕಾದಲ್ಲೇ ಒಂದು ಸಣ್ಣ ಮನೆ ಖರೀದಿಸಿದ್ದಲ್ಲದೆ, ತನ್ನ ಕುಟುಂಬಕ್ಕಾಗಿ ತೆಲಂಗಾಣದಲ್ಲಿ ಮತ್ತೊಂದು ಮನೆ ನಿರ್ಮಿಸಿದ್ದ. ಆದರೆ ಕೃತಕ ಬುದ್ಧಿಮತ್ತೆ (ಎಐ) ಪರಿಣಾಮದಿಂದ ಉದ್ಯೋಗ ಕಳೆದುಕೊಂಡಿದ್ದು ಆತನಿಗೆ ಮಾನಸಿಕ ಆಘಾತವನ್ನುಂಟುಮಾಡಿತ್ತು. ಇದೇ ಕಾರಣವನ್ನು ಆತ ತನ್ನ ಡೆತ್‌ನೋಟ್‌ನಲ್ಲಿಯೂ ಬರೆದಿದ್ದ. ಉದ್ಯೋಗ ಕಳೆದುಕೊಂಡ ನಂತರ ಭಾರತಕ್ಕೆ ಮರಳಿದ ರೆಡ್ಡಿ, ಹೊಸ ಕೆಲಸಕ್ಕಾಗಿ ನಿರಂತರವಾಗಿ ಪ್ರಯತ್ನಿಸುತ್ತಿದ್ದ. ಆದರೆ ಅವಕಾಶಗಳು ಸಿಗದೇ ಹೋದ ಕಾರಣ ಆತಂಕ ಮತ್ತು ಒತ್ತಡ ಹೆಚ್ಚಾಗಿತ್ತು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಈ ಸಂಕಷ್ಟದ ಸಮಯದಲ್ಲಿ ಕುಟುಂಬದವರು ಮತ್ತು ಪತ್ನಿ ಶಾಜಿಯಾ ಅವನಿಗೆ ಬೆಂಬಲವಾಗಿ ನಿಂತಿದ್ದರೆನ್ನುವುದೂ ತಿಳಿದು ಬಂದಿದೆ.

ಆಗಿದ್ದೇನು?

- **ತೆಲಂಗಾಣ ಮೂಲದ ಟೆಕ್ಕಿ ದಂಪತಿ ಅಪಾರ್ಟ್‌ಮೆಂಟ್‌ನಲ್ಲಿ ಆತ್ಮಹತ್ಯೆ**
- **ಅಂತರ್‌ಧರ್ಮೀಯ ವಿವಾಹ ಆಗಿದ್ದ ಭಾನು ಚಂದರ್, ಬಿಬಿ ಶಾಜಿಯಾ**
- **ಕೌಟುಂಬಿಕ ಕಲಹದ ಹಿನ್ನೆಲೆ ಆತ್ಮಹತ್ಯೆ ಎಂದು ಶಂಕೆ , ಪತ್ರ ಸಿಕ್ಕ ಬಳಿಕ ಸತ್ಯಾಂಶ ಬಯಲು**
- **ಎಐ ಪರಿಣಾಮ 80 ಲಕ್ಷ ಪ್ಯಾಕೇಜ್ ಉದ್ಯೋಗ ಕಳೆದುಕೊಂಡಿದ್ದ ಟೆಕ್ಕಿ**
- **ಅಮೆರಿಕದಿಂದ ಬಂದು ಕೆಲವು ತಿಂಗಳ ಹಿಂದೆ ಬೆಂಗಳೂರಿನಲ್ಲಿ ದಂಪತಿ ನೆಲೆ**
- **ಕೆಲಸ ಸಿಗದ ಹಿನ್ನೆಲೆ ಟೆಕ್ಕಿ ಭಾನು ಚಂದರ್ ನೇಣಿಗೆ ಶರಣು, ಪತ್ನಿಯೂ ಸಾವು**

ಟೆಕ್ಕಿ ಮೃತದೇಹದ ಪಕ್ಕ ಸಿಕ್ಕ ಚೀಟಿ ಸುಳಿವು

ಮಲ್ಟಿ ನ್ಯಾಷನಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಶಾಜಿಯಾ, ಮಂಗಳವಾರ ಬೆಳಗ್ಗೆ 7.30ಕ್ಕೆ ತನ್ನ ನೈಟ್ ಶಿಫ್ಟ್ ಮುಗಿಸಿ ಮನೆಗೆ ಮರಳಿದ್ದಳು. ಈ ವೇಳೆ ಪತಿ ಬಾಗಿಲು ತೆರೆಯದ ಕಾರಣ ಬಳಿಕ ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದ್ದಳು. ಒಳಗಿನಿಂದ ಲಾಕ್ ಆಗಿದ್ದ ಬಾಗಿಲು ಒಡೆದು ನೋಡಿದಾಗ ರೆಡ್ಡಿ ಮೃತ ಪತ್ತೆಯಾಗಿತ್ತು. ಮೃತದೇಹದ ಪಕ್ಕ ಒಂದು ಚೀಟಿಯೂ ಪತ್ತೆಯಾಗಿತ್ತು. ಈ ವೇಳೆ ಸುಮಾರು 20 ನಿಮಿಷಗಳ ಕಾಲ ಘಟನಾ ಸ್ಥಳದಲ್ಲೇ ಇದ್ದ ಶಾಜಿಯಾ, ದಿಕ್ಕು ತೋಚದಂತಾಗಿ, ಯಾರಿಗೂ ತಿಳಿಯದಂತೆ 17ನೇ ಮಹಡಿಗೆ ತೆರಳಿ ಅಲ್ಲಿಂದ ಜಿಗಿದು ಪ್ರಾಣ ಬಿಟ್ಟಿದ್ದಾಳೆ ಎನ್ನಲಾಗಿದೆ.

ನಗರದ ವಿವಿಧ ಕಡೆ ಸಂಚಾರ ದಟ್ಟಣೆ ಸುಧಾರಣೆಗೆ ಅಧ್ಯಯನ

ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಮತ್ತು ರಸ್ತೆ ಸುರಕ್ಷತಾ ಸವಾಲನ್ನು ಸುಧಾರಿಸುವ ಹಿನ್ನೆಲೆಯಲ್ಲಿ ಸಂಚಾರ ಪೊಲೀಸ್ ಇಲಾಖೆ, ರಸ್ತೆ ಸಂಚಾರ ಶಿಕ್ಷಣ ಸಂಸ್ಥೆ (ಐಆರ್‌ಟಿಇ) ಹಾಗೂ ಡಿಯಾಜಿಯೋ ಇಂಡಿಯಾ ಸಹಯೋಗದಲ್ಲಿ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ಸುಧಾರಣೆಗಾಗಿ ಅಧ್ಯಯನ ನಡೆಸಿವೆ.

ಈ ಅಧ್ಯಯನಕ್ಕಾಗಿ ಚಾಲುಕ್ಯ ಸರ್ಕಲ್, ಕಂಟೋನ್ಮೆಂಟ್ ರೈಲು ನಿಲ್ದಾಣ ಜಂಕ್ಷನ್, ಎಚ್. ಸಿದ್ದಯ್ಯ ವೃತ್ತವನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ವೈಜ್ಞಾನಿಕ ವಿಧಾನದಲ್ಲಿ ಸಂಚಾರ ಪ್ರಮಾಣ, ರಸ್ತೆ ಬಳಕೆದಾರರ ವರ್ತನೆ ಮತ್ತು ಸುರಕ್ಷತಾ ಅಂಶಗಳ ಕುರಿತು ವಿಶ್ಲೇಷಣೆ ನಡೆಸಲಾಗಿದೆ. ಅದೇ ರೀತಿ, ತಳಮಟ್ಟದ ಸಂಶೋಧನೆ, ವಾಹನಗಳ ದಟ್ಟಣೆಯ ಟ್ರ್ಯಾಕಿಂಗ್, ಸಾಮರ್ಥ್ಯ ವೃದ್ಧಿಗೆ ತೆಗೆದುಕೊಳ್ಳಬಹುದಾಗ ಕ್ರಮಗಳ ಬಗ್ಗೆಯೂ ಅಧ್ಯಯನ ನಡೆಸಲಾಗಿದೆ. ಸಂಚಾರ ಚಲನವಲನ, ಪಾದಚಾರಿಗಳ ನಡೆ, ರಸ್ತೆ ವಿನ್ಯಾಸದ ಪರಿಣಾಮ ಹಾಗೂ ಯೋಜನಾ ಸುಧಾರಣೆಗಳ ಬಗ್ಗೆ ಪ್ರಮುಖ ತಿಳಿವಳಿಕೆ ನೀಡಲಾಗಿದ್ದು, ಸಂಚಾರ ಮಾರ್ಗ ವಿಭಜನೆ, ಪಾದಚಾರಿಗಳ ಸುರಕ್ಷಿತ ರಸ್ತೆ ದ್ವೀಪಗಳು, ಸಿಗ್ನಲ್ ವ್ಯವಸ್ಥೆ ಸುಧಾರಣೆ ಮತ್ತು ಸೂಚನಾ ಫಲಕಗಳ ಅಭಿವೃದ್ಧಿ ಸೇರಿದಂತೆ ಕಡಿಮೆ ವೆಚ್ಚದ ಕ್ರಮಗಳನ್ನು ಶಿಫಾರಸು ಮಾಡಲಾಗಿದೆ. ಈ ಕುರಿತು ಮಾತನಾಡಿದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ, ಬೆಂಗಳೂರಿನಂತಹ ನಗರದಲ್ಲಿ ಸಂಚಾರ ನಿರ್ವಹಣೆಗೆ ಕೇವಲ ಕಾನೂನು ಜಾರಿಯಷ್ಟೇ ಸಾಲದು. ರಸ್ತೆ ವಿನ್ಯಾಸ ಮತ್ತು ತಳಮಟ್ಟದ ವಾಸ್ತವತೆಗಳ ಅರಿವು ಅಗತ್ಯ. ಇಂತಹ ಉಪಕ್ರಮಗಳು ಅಧಿಕಾರಿಗಳ ಸಾಮರ್ಥ್ಯವನ್ನು ಹೆಚ್ಚಿಸಿ, ದೈನಂದಿನ ಸಂಚಾರ ನಿರ್ವಹಣೆಗೆ ತಾಂತ್ರಿಕ ತಿಳಿವಳಿಕೆಯನ್ನು ಒದಗಿಸುತ್ತವೆ ಎಂದರು.

ಸಮೀರ್‌ಗೆ ಹೈಕೋರ್ಟ್ ತರಾಟೆ

ಬೆಂಗಳೂರು: ಧರ್ಮಸ್ಥಳದ ಅಸಹಜ ಸಾವುಗಳ ಕುರಿತು ವಿಡಿಯೊ ಮಾಡಿದ್ದ ಎಂ.ಡಿ. ಸಮೀರ್ ವಿರುದ್ಧದ ಪೊಲೀಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ತಡೆಯಾಜ್ಞೆ ನೀಡಿ ತರಾಟೆಗೆ ತೆಗೆದುಕೊಂಡಿದೆ. ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಎಂ.ಡಿ. ಸಮೀರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ನ್ಯಾಯಪೀಠದ ಕಟು ವಿಮರ್ಶೆ ಮಾಡಿದ್ದು, ನಿಮ್ಮ ಕಕ್ಷಿದಾರರು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲವೇ? ಈ ರೀತಿ ವಿಡಿಯೊ ಮಾಡಿ ಬೇರೆಯವರ ನೆಮ್ಮದಿಯನ್ನು ಹಾಳು ಮಾಡುತ್ತೀರಿ ಎಂದು ಸಮೀರ್ ಪರ ವಕೀಲರನ್ನು ತರಾಟೆಗೆ ತೆಗೆದುಕೊಂಡಿತು. ಪ್ರಾಸಿಕ್ಯೂಟರ್ ವಾದ ಮಾಡಿ, ಕೃತಕ ಬುದ್ಧಿಮತ್ತೆ ನೆರವಿನಿಂದ ಸಮೀರ್ ವಿಡಿಯೊ ಮಾಡಿದ್ದಾರೆ. ಕೆಲವು ಶವಗಳನ್ನು ಅಲ್ಲಿ ಹೂಳಲಾಗಿರುವುದನ್ನು ತೋರಿಸಲಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ಈ ರೀತಿಯ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ನೀವು ಮುಕ್ತಾಯ ಮಾಡಿಕೊಳ್ಳಬೇಕು. ಅನಗತ್ಯವಾಗಿ ಈ ಪ್ರಕರಣಗಳನ್ನು ವಿಸ್ತರಿಸಬೇಡಿ ಎಂದು ಮನವಿ ಮಾಡಿದರು. ಈ ರೀತಿ ವಿಡಿಯೋಗಳು ಇನ್ನು ಮುಂದೆ ಮಾಡುವುದಿಲ್ಲ ಎಂದು ಅಫಿಡವಿಟ್ ಹಾಕಬೇಕು ಎಂದು ಅರ್ಜಿದಾರ ಪರ ವಕೀಲರಿಗೆ ಸೂಚನೆ ನೀಡಿದ ಹೈಕೋರ್ಟ್ ವಿಚಾರಣೆಯನ್ನು ಏಪ್ರಿಲ್ 22ಕ್ಕೆ ಮುಂದೂಡಿದೆ.

ಏ.3, 4, 5 ರಂದು ಅಖಂಡ ರಾಮಾಯಣ ಪಾರಾಯಣ

ಬೆಂಗಳೂರು: ಸಂಸ್ಕೃತ ಭಾರತೀಯ ವಿದ್ವತ್ ಪರಿಷತ್‌ನಿಂದ ಇಲ್ಲಿನ ಗಿರಿನಗರದ ಅಕ್ಷರರಾಮದಲ್ಲಿ ಅಖಂಡ ರಾಮಾಯಣ ಪಾರಾಯಣ ಆಯೋಜನೆ ಮಾಡಲಾಗಿದೆ.

ಏ.3, 4, 5 ರಂದು ಅಖಂಡ ರಾಮಾಯಣ ಪಾರಾಯಣ ನಡೆಯಲಿದೆ. ಭಾನುವಾರ (ಏ.5)ದಂದು ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಮಂಗಲ ಪೂಜಾಕಾರ್ಯಕ್ರಮದಲ್ಲಿ ಸಂಸ್ಕೃತ ಭಾರತೀಯ ಅಖಿಲ ಭಾರತೀಯ ಅಧ್ಯಕ್ಷರಾದ ಪ್ರೊ.ರಮೇಶ್‌ಕುಮಾರ ಪಾಂಡೆ ಸೇರಿ ಹಿರಿಯರು ಪಾಲ್ಗೊಳ್ಳಲಿದ್ದಾರೆ. ಮೂರು ದಿನ ಮತ್ತು ಎರಡು ರಾತ್ರಿ ಸೇರಿ 52 ಘಂಟೆಗಳ ನಿರಂತರ ಪಾರಾಯಣ ನಡೆಯಲಿದ್ದು, ಗಾಯತ್ರಿ ಮಂತ್ರ ಕ್ರಮದಲ್ಲಿ 24 ಸಾವಿರ ಶ್ಲೋಕಗಳ ಪಠಣೆ ಮಾಡಲಾಗುವುದು. ಪ್ರತಿ ಎರಡು ಘಂಟೆಗೆ ಒಂದು ತಂಡದಂತೆ 40 ಕ್ಕೂ ಹೆಚ್ಚಿನ ತಂಡಗಳಿಂದ ಮಂತ್ರ ಪಠಿಸಲಾಗುವುದು. ಈ ಕಾರ್ಯಕ್ರಮಕ್ಕೆ 30 ಕ್ಕೂ ಹೆಚ್ಚಿನ ಸಂಘ ಸಂಸ್ಥೆಗಳು ಕೈಜೋಡಿಸಿವೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮೂಡಲಪಾಳ್ಯದ ಕಲ್ಯಾಣನಗರದಲ್ಲಿರುವ ಜ್ಞಾನಸೌಧ ಆವರಣದಲ್ಲಿ ನಡೆದಾಡುವ ದೇವರು, ತ್ರಿವಿಧ ದಾಸೋಹಿ ಕರ್ನಾಟಕ ರತ್ನ ಡಾ.ಶ್ರೀ ಶಿವಕುಮಾರ ಸ್ವಾಮಿಗಳ 119ನೇ ಜನ್ಮದಿನಾಚರಣೆ ಕಾರ್ಯಕ್ರಮ ನಡೆಯಿತು. ವಿಜಯನಗರ ಕ್ಷೇತ್ರದ ನಾಯಕ ಪ್ರದೀಪ್ ಕೃಷ್ಣಪ್ಪ ಹಾಗೂ ಮಾಜಿ ಮೇಯರ್ ಶಾಂತಕುಮಾರಿ ರವಿಕುಮಾರ್ ಸೇರಿ ಅನೇಕರು ಶ್ರೀಗಳ ಪುತ್ಥಳಿಗೆ ಪೂಜೆ ಸಲ್ಲಿಸಿದರು.

ಅಗ್ನಿ ಅವಘಡ: ಐವರು ಪಾರು

ಬೆಂಗಳೂರು: ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡ ಘಟನೆ ಲಗ್ಗೆರೆಯ ರಾಜೀವ್ ಗಾಂಧಿ ನಗರದಲ್ಲಿ ನಡೆದಿದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಮನೆಯಲ್ಲಿದ್ದ ಐವರೂ ಹೊರಬಂದಿದ್ದು, ಅನಾಹುತ ತಪ್ಪಿದೆ. ಮನೆಯಲ್ಲಿದ್ದ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ.

ಮೂರಂತಸ್ತಿನ ಕಟ್ಟಡದ ಮೊದಲ ಮಹಡಿಯಲ್ಲಿ ಹರಗಯ್ಯ ಹಾಗೂ ಭಾಗ್ಯಮ್ಮ ದಂಪತಿ ತಮ್ಮ ಮಕ್ಕಳೊಂದಿಗೆ ವಾಸವಾಗಿದ್ದರು. ಬೆಳಗ್ಗೆ ಮನೆಗೆ ಹೊಸ ಗ್ಯಾಸ್ ಸಿಲಿಂಡರ್ ಬಂದಿತ್ತು. ಖಾಲಿಯಾಗಿದ್ದ ಹಳೆ ಸಿಲಿಂಡರ್ ಬದಲಿಸಲು ಮುಂದಾದಾಗ ಅನಿಲ ಸೋರಿಕೆಯಾಗಿ ಹಠಾತ್ ಬೆಂಕಿ ಕಾಣಿಸಿಕೊಂಡಿದೆ. ನೋಡ ನೋಡುತ್ತಿದ್ದಂತೆಯೇ ಬೆಂಕಿ ಇಡೀ ಮನೆಗೆ ಆವರಿಸಿದೆ. ತಕ್ಷಣ ಕುಟುಂಬಸ್ಥರು ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಇದರಿಂದಾಗಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸ್ಫೋಟದ ತೀವ್ರತೆಗೆ ಮನೆಯಲ್ಲಿದ್ದ ದಿನಬಳಕೆ ವಸ್ತುಗಳು ಹಾಗೂ ಪೀಠೋಪಕರಣ ಭಸ್ಮವಾಗಿವೆ. ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೈಚೀಲ ಖರೀದಿ ಅಕ್ರಮ: ರೋಹಿಣಿ ಸಿಂಧೂರಿಗೆ ಸಂಕಷ್ಟ

ಬೆಂಗಳೂರು: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿಗೆ ಸಂಕಷ್ಟ ಎದುರಾಗಿದೆ. ಕೈಚೀಲ ಖರೀದಿ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಪೂರ್ವಾನುಮತಿ ನೀಡುವಂತೆ ಹೈಕೋರ್ಟ್ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿದೆ.

ಮೈಸೂರಿನಲ್ಲಿ ಜಿಲ್ಲಾಧಿಕಾರಿಯಾಗಿದ್ದ ವೇಳೆ ಪರಿಸರ ಸ್ನೇಹಿ ಕೈಚೀಲ ಖರೀದಿಯಲ್ಲಿ ಅವ್ಯವಹಾರ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಎಫ್‌ಐಆರ್ ದಾಖಲು ಮಾಡಲು ಮನವಿ ಮಾಡಲಾಗಿತ್ತು. ಆದರೆ ಪೂರ್ವಾನುಮತಿ ನೀಡಲು ಸರಕಾರ ನಿರಾಕರಿಸಿತ್ತು.

ರಾಜ್ಯ ಸರಕಾರದ ನಿರ್ಧಾರ ಪ್ರಶ್ನಿಸಿ ವಕೀಲ ರವಿಚಂದ್ರೇಗೌಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ 4 ವಾರದ ಒಳಗೆ ಪೂರ್ವಾನುಮತಿ ನೀಡಲು ಸೂಚನೆ ನ್ಯಾಯಮೂರ್ತಿ ನಾಗಪ್ರಸನ್ನ ಪೀಠ ಆದೇಶ ನೀಡಿದೆ. ಭ್ರಷ್ಟಾಚಾರ ಆರೋಪ ಬಂದಾಗ ತನಿಖೆ ಅನಿವಾರ್ಯಎಂದು ನ್ಯಾಯಮೂರ್ತಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಗರಸಭೆ, ಪುರಸಭೆಗಳ ಪೂರ್ವಾನುಮತಿ ಇಲ್ಲದೆ ದುಬಾರಿ ಬೆಲೆಗೆ ಬ್ಯಾಗ್ ಖರೀದಿಸಲಾಗಿದೆ. ಈ ಅಕ್ರಮಕ್ಕೆ ಸಂಬಂಧಿಸಿದಂತೆ 2021ರ ಅ. 13ರಂದು ಮೈಸೂರು ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಭ್ರಷ್ಟಾಚಾರ ನಿಗ್ರಹ ಕಾಯಿದೆ-1988ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ತನಿಖೆ ನಡೆಸಬೇಕೆಂದು ಎನ್.ಆರ್. ರವಿಚಂದ್ರೇಗೌಡ ದೂರು ನೀಡಿದ್ದರು.

ಏನಿದು ಆರೋಪ?

ಜಿಲ್ಲಾಧಿಕಾರಿಯಾಗಿದ್ದ ಸಮಯದಲ್ಲಿ ರೋಹಿಣಿ ಸಿಂಧೂರಿ, ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸಬೇಕು ಮತ್ತು ಪ್ಲಾಸ್ಟಿಕ್ ಬಳಕೆಗೆ ಗುಡ್‌ಬೈ ಹೇಳಿ ಬಟ್ಟೆಯ ಕೈಚೀಲಗಳನ್ನು ಬಳಸಬೇಕು ಎಂದು ಜಿಲ್ಲೆಯ ನಗರ, ಗ್ರಾಮಾಂತರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದ್ದರು. ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಚೀಲಕ್ಕೆ 13 ರು. ಇದ್ದರೆ ಅವುಗಳಿಗೆ ಪ್ರತಿ ಚೀಲಕ್ಕೆ 52 ರು. ದರ ನೀಡಿ ಖರೀದಿಸಲಾಗಿದೆ. ಈ ನಿರ್ಧಾರದಿಂದ ಸರಕಾರದ ಬೊಕ್ಕಸಕ್ಕೆ 7,65,15,816 ಕೋಟಿ ರು. ನಷ್ಟವಾಗಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಪ್ರಯೋಜನ ನೀಡುವ ಉದ್ದೇಶದಿಂದ ಕಲ್ಯಾಣ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನು ಈ ಕೈಚೀಲಗಳ ಖರೀದಿಗೆ ಬಳಸಿ ಭ್ರಷ್ಟಾಚಾರ ಎಸಗಲಾಗಿದೆ.

ದಂಪತಿಗೆ ಕ್ರಿಕೆಟ್ ಸ್ಟಂಪ್‌ನಿಂದ ಹಲ್ಲೆ ಆರೋಪ

ಬೆಂಗಳೂರು: ಪಾರ್ಕಿಂಗ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ದಂಪತಿ ಹಲ್ಲೆಗೊಳಗಾದ ಘಟನೆ ನಗರದ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಸಿಂಡಿಕೇಟ್ ಲೇಔಟ್‌ನಲ್ಲಿ ನಡೆದಿದೆ. ಸಂತೋಷ್, ಅವರ ಪತ್ನಿ ಶುಭಾ ಮೇಲೆ ಕ್ರಿಕೆಟ್ ಸ್ಟಂಪ್, ದೊಣ್ಣೆಗಳಿಂದ ಹಲ್ಲೆಗೈದ ಆರೋಪ ಕೇಳಿಬಂದಿದೆ. ಹಲ್ಲೆಗೈದ ಆರೋಪದಡಿ ರತ್ನಮ್ಮ ಮತ್ತವರ ಕುಟುಂಬದ ಮೂವರು ಸದಸ್ಯರ ವಿರುದ್ಧ ಪ್ರಕರಣ ದಾಖಲಾಗಿದೆ.

ಆರೋಪವೇನು?: ಸಂತೋಷ್ ಹಾಗೂ ಶುಭಾ ವಾಸವಿದ್ದ ಕಟ್ಟಡದ ಕೆಳಮಹಡಿಯಲ್ಲಿ ರತ್ನಮ್ಮ ಅವರ ಕುಟುಂಬ ವಾಸವಿತ್ತು. ಸಂತೋಷ್ ಅವರು ಪ್ರತಿದಿನ ತಮ್ಮ ಕಾರನ್ನು ಮನೆ ಕೆಳಗಿನ ನಿಗದಿತ ಜಾಗದಲ್ಲಿ ಪಾರ್ಕ್ ಮಾಡುತ್ತಿದ್ದರು. ಆದರೆ ಮಾ.30ರಂದು ಕಾರು ಪಾರ್ಕ್ ಮಾಡಲು ಹೋದಾಗ, ಆ ಜಾಗದಲ್ಲಿ ರತ್ನಮ್ಮ ಅವರ ಮಗನ ಸ್ಕೂಟರ್ ಅಡ್ಡವಾಗಿ ನಿಲ್ಲಿಸಲಾಗಿತ್ತು. ಈ ವೇಳೆ ಸ್ಕೂಟರ್ ಸ್ವಲ್ಪ ಪಕ್ಕಕ್ಕೆ ತೆಗೆಯುವಂತೆ ಸಂತೋಷ್ ಕೇಳಿದಾಗ, ಪ್ರತಿದಿನ ನಿಂದು ಇದೇ ಆಯ್ತು ಎಂದು ರತ್ನಮ್ಮ ಅವರ ಕುಟುಂಬದವರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ. ವಾಗ್ವಾದ ವಿಕೋಪಕ್ಕೆ ತಿರುಗಿದಾಗ ರತ್ನಮ್ಮ, ಆಕೆಯ ಮಗ, ಅಳಿಯ ಹಾಗೂ ಮಗಳು ಸೇರಿ ಕ್ರಿಕೆಟ್ ಬ್ಯಾಟ್, ದೊಣ್ಣೆ, ಚಾಕುವಿನಿಂದ ಭೀಕರವಾಗಿ ಹಲ್ಲೆ ಮಾಡಿದ್ದಾರೆ. ಗಲಾಟೆಯನ್ನು ಬಿಡಿಸಲು ಬಂದ ತಮ್ಮ ಪತ್ನಿ ಶುಭಾ ಅವರ ಮೇಲೂ ಆರೋಪಿಗಳು ಹಲ್ಲೆ ನಡೆಸಿದ್ದಾರೆ. ಅಷ್ಟೇ ಅಲ್ಲದೆ ಪೊಲೀಸರಿಗೆ ಕರೆ ಮಾಡಿದ್ದಕ್ಕೆ ಮತ್ತಷ್ಟು ಕೆರಳಿದ ಆರೋಪಿಗಳು ಕಾರನ್ನು ಸಹ ಜಖಂಗೊಳಿಸಿ ಅಟ್ಟಹಾಸ ಮೆರೆದಿದ್ದಾರೆ ಎಂದು ಸಂತೋಷ್ ಆರೋಪಿಸಿದ್ದಾರೆ.

ಇನ್‌ಸ್ಪೆಕ್ಟರ್ ವಿರುದ್ಧ ಪ್ರಕರಣ ತಡೆಗೆ ಹೈ ನಕಾರ

ಬೆಂಗಳೂರು/ಮಂಗಳೂರು: ಅಮಾನತುಗೊಂಡ ಮೂಡುಬಿದಿರೆ ಇನ್‌ಸ್ಪೆಕ್ಟರ್ ಸಂದೇಶ್ ಕಾಮಕಾಂಡ ಪ್ರಕರಣ ರಾಜ್ಯದಲ್ಲಿ ಭಾರಿ ಕೋಲಾಹಲ ಸೃಷ್ಟಿಸಿದೆ. ಶಿಕ್ಷಕಿ ಮೇಲೆ ನಿರಂತರ ಅತ್ಯಾಚಾರ ಎಸಗಿದ ಆರೋಪ ಕೇಳಿಬಂದಿದ್ದು, ಈ ಸಂಬಂಧ ಸಂದೇಶ್ ವಿರುದ್ಧ ಹೊಸ ಎಫ್‌ಐಆರ್ ದಾಖಲಾಗಿದೆ. ಇದೀಗ ಈ ಪ್ರಕರಣವನ್ನು ರದ್ದು ಕೋರಿ ಸಂದೇಶ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಆದರೆ, ಹೈಕೋರ್ಟ್, ಇನ್‌ಸ್ಪೆಕ್ಟರ್ ಮಾಡಿರುವುದು ಅಧಿಕಾರದ ದುರುಪಯೋಗವಲ್ಲವೇ? ದೂರು ಕೊಡಲು ಬಂದ ಮಹಿಳೆಯೊಂದಿಗೆ ಸಂಬಂಧ ಬೆಳೆಸಿದರೆ ಇನ್ನೇನಾಗುತ್ತೆ ಎಂದು ಸಂದೇಶ್‌ಗೆ ತರಾಟೆಗೆ ತೆಗೆದುಕೊಂಡಿದ್ದು, ಪ್ರಕರಣಕ್ಕೆ ಮಧ್ಯಂತರ ತಡೆ ನೀಡಲು ನಿರಾಕರಿಸಿ ವಿಚಾರಣೆಯನ್ನು ಮುಂದೂಡಿದೆ.

ಮಹಿಳೆ ದಾಖಲಿಸಿದ ಅತ್ಯಾಚಾರ ಪ್ರಕರಣ ರದ್ದು ಕೋರಿ ಅಮಾನತುಗೊಂಡ ಮೂಡಬಿದ್ರೆ ಇನ್‌ಸ್ಪೆಕ್ಟರ್ ಸಂದೇಶ್ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ವಿಚಾರಣೆ ನಡೆಸಿದ್ದು, ಈ ವೇಳೆ ಇನ್‌ಸ್ಪೆಕ್ಟರ್ ಪರ ವಕೀಲ ವಾದ ಮಾಡಿ, ಮಹಿಳೆಯೊಂದಿಗೆ ಒಪ್ಪಿತ ಸಂಬಂಧವಿತ್ತು. ಇನ್‌ಸ್ಪೆಕ್ಟರ್ ವಿರುದ್ಧದ ಅತ್ಯಾಚಾರ ಆರೋಪಕ್ಕೆ ಆಧಾರಗಳಿಲ್ಲ ಎಂದು ಹೇಳಿದರು.

ಪಿಎಸ್‌ಐ ಸಂದೇಶ್‌ಗೆ ಹೈಕೋರ್ಟ್ ತರಾಟೆ

ಇನ್‌ಸ್ಪೆಕ್ಟರ್ ಪರ ವಕೀಲರ ವಾದ ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ, ಇನ್‌ಸ್ಪೆಕ್ಟರ್ ಮಾಡಿರುವುದು ಅಧಿಕಾರದ ದುರುಪಯೋಗವಲ್ಲವೇ? ದೂರು ಕೊಡಲು ಬಂದ ಮಹಿಳೆಯೊಂದಿಗೆ ಸಂಬಂಧ ಬೆಳೆಸಿದರೆ ಇನ್ನೇನಾಗುತ್ತೆ ಎಂದು ಖಾರವಾಗಿ ಪ್ರಶ್ನಿಸಿದ್ದು, ವಿಚಾರಣೆಯನ್ನು ಏಪ್ರಿಲ್ 6ಕ್ಕೆ ಮುಂದೂಡಿದೆ. ಅಲ್ಲದೇ ಅಲ್ಲಿಯವರೆಗೆ ಬಂಧಿಸದಂತೆ ಮಧ್ಯಂತರ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 21.04.2026 (ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗಬೇಕಾದ ಮೊಬಲಗು: **ರೂ. 60,28,388.80 (ರೂಪಾಯಿ ಅರವತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ಮುನ್ನೂರ ಎಂಭತ್ತೆಂಟು ಮತ್ತು ಎಂಭತ್ತು ಪೈಸೆ ಮಾತ್ರ) ದಿನಾಂಕ: 26.03.2026** ರಂದು ಇದ್ದಂತೆ ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶ್ರೀ.ವಿಜಯ್ ಕುಮಾರ್** ಬಿನ್ ರವಿ ಕುಮಾರ್, ನಂ.71, ಬಾಗೂರು ಗ್ರಾಮ, ಬಾಗೇಪಲ್ಲಿ ಅಂಚೆ, ಹೊಸೂರು ತಾಲ್ಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು-635103. (2) **ಶ್ರೀ. ಲಕ್ಷ್ಮೀನಾರಾಯಣ** ಬಿನ್ ಶ್ರೀ ರವಿ ಕುಮಾರ್, ನಂ.71, ಬಾಗೂರು ಗ್ರಾಮ, ಬಾಗೇಪಲ್ಲಿ ಅಂಚೆ, ಹೊಸೂರು ತಾಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು-635103. (3) **ಶ್ರೀ.ರವಿ ಕುಮಾರ್** ಬಿ ಎಂ ಬಿನ್ ಮುನಿಸ್ವಾಮಿ ನಂ.71, ಬಾಗೂರು ಗ್ರಾಮ, ಬಾಗೇಪಲ್ಲಿ ಅಂಚೆ, ಹೊಸೂರು ತಾಲ್ಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು-635103. (4) **ಶ್ರೀ ಟಿ. ಮುಕುಂತನ್ (ಜಾಮೀನುದಾರರು)** ಬಿನ್ ತಿಮ್ಮರಾಯಪ್ಪ, ಡಿ ನಂ.4/21ಎಸ್ ಕುರುಬಟ್ಟಿ, ಸರಗಪಲ್ಲಿ ಪೋಸ್ಟ್, ಡೆಂಕನಿಕೋಟ್ಟೈ, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು - 635114 ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 18.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಗ್ರಾಮ ನಾಥಮ್ ಸರ್ವೆ ನಂ. 697, ಹೊಸ ನಾಥಮ್ 697/27, ಈ ಆಸ್ತಿಯು ಬಾಗೇಪಲ್ಲಿ ಗ್ರಾಮ, ಹೊಸೂರು ತಾಲ್ಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡಿನಲ್ಲಿದೆ. ವಿಸ್ತೀರ್ಣ 110 ಚದರ ಮೀಟರ್‌ಗಳು ಅಥವಾ 1180 ಚದರ ಅಡಿ, ಜೊತೆಗೆ ಆರ್‌ಸಿಸಿ ಕಟ್ಟಡವನ್ನು ಹೊಂದಿರುತ್ತದೆ. ಮತ್ತು ಚಕ್ಕುಬಂದಿ : ಕೃಷ್ಣಪ್ಪ ರವರ ಮನೆ, ಪಶ್ಚಿಮಕ್ಕೆ : ಗೋಪಾಲಿಯಪ್ಪ ರವರ ಮನೆ, ಉತ್ತರಕ್ಕೆ : ಪಾಪಣ್ಣ ರವರ ಮನೆ, ದಕ್ಷಿಣಕ್ಕೆ : 3 ಅಡಿ ಪಂಚಾಯತ್ ರಸ್ತೆ.	₹. 56.00	₹. 5.60	₹. 1.00

ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ : 10.04.2026, ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ.
ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು (ದೂರವಾಣಿ ಸಂಖ್ಯೆ: 08025310066, 7022044933 ಮತ್ತು 9039609346) ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 31.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ 05.05.2026 ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗಬೇಕಾದ ಮೊಬಲಗು: **ರೂ.75,05,278.07 (ರೂಪಾಯಿ ಎಪ್ಪತ್ತೈದು ಲಕ್ಷದ ಐದು ಸಾವಿರದ ಎರಡುನೂರ ಎಪ್ಪತ್ತೆಂಟು ಮತ್ತು ಏಳು ಪೈಸೆ ಮಾತ್ರ) ಜೊತೆಗೆ ದಿನಾಂಕ: 26.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ ಬೆಂಗಳೂರು** ರವರಿಂದ **ಸಾಲಗಾರರಾದ: (1) ಶ್ರೀ ಆನಂದ್ ರಾಜ್ ಟಿ** ಬಿನ್ ಶ್ರೀ ಜಿ ತಮ್ಮಯ್ಯ, **(2) ಶ್ರೀಮತಿ ಶಿವರಾಮ್ ಸುಬ್ಬಮ್ಮ** ಕೋಂ ಶ್ರೀ ಆನಂದ್ ರಾಜ್ ಟಿ, ಇವರಿಬ್ಬರ ವಿಳಾಸ : ನಂ.176, ಗುಲ್ಲಮ್ಮ ರಸ್ತೆ, ಕಚಾರಕನಹಳ್ಳಿ, ಬೆಂಗಳೂರು-560084. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 04.05.2026 ರ ಸಂಜೆ 6.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್ ಗುಣಾಂಕಗಳ ಮೊತ್ತ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಶೆಡ್ಯೂಲ್ 'ಎ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ವಾಸಯೋಗ್ಯ ಪರಿವರ್ತಿತ ಭೂಮಿಯ ವಿಸ್ತೀರ್ಣ 2 ಎಕರೆಗಳು 8 ಗುಂಟೆಗಳು, ಸರ್ವೆ ನಂ.108/2, ಈ ಆಸ್ತಿಯು ಕಚನಾಯಕನಹಳ್ಳಿ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ, (ದಿನಾಂಕ 11/11/1992ರಂದು ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ.B/DIS/ALN/SR(A)/103/1998-99 ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ), ಜೊತೆಗೆ ಎ, ಬಿ, ಸಿ, ಡಿ, ಇ ಮತ್ತು ಎಫ್ ಬ್ಲಾಕ್‌ಗಳಲ್ಲಿ ಗಾರ್ಡನ್ ರೆಸಿಡೆನ್ಸಿ ಯೂನಿಟ್‌/ಗಳು ಎಂದು ಕರೆಯಲ್ಪಡುವ 200 ವಾಸಯೋಗ್ಯ ಅಪಾರ್ಟ್‌ಮೆಂಟ್‌ಗಳು ಮತ್ತು ಕಾರ್ ಪಾರ್ಕಿಂಗ್ ಸ್ಲಾಟ್‌ಗಳನ್ನು ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಭೂಮಿಯ ಸರ್ವೆ ನಂ.108/2, ಪಶ್ಚಿಮಕ್ಕೆ : ರಸ್ತೆ, ಖರಾಬ್ ಭೂಮಿಯಿಂದ ನಿರ್ಮಿಸಲಾಗಿದೆ, ಉತ್ತರಕ್ಕೆ : ರಸ್ತೆ, ಖರಾಬ್ ಭೂಮಿಯಿಂದ ನಿರ್ಮಿಸಲಾಗಿದೆ, ದಕ್ಷಿಣಕ್ಕೆ : ಟ್ಯಾಂಕ್ ಬೆಡ್. **ಶೆಡ್ಯೂಲ್ 'ಬಿ' ಆಸ್ತಿ :** 400 ಚದರ ಅಡಿಗಳು ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು, ಶೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, ಇದು ಶೆಡ್ಯೂಲ್ ಅಪಾರ್ಟ್‌ಮೆಂಟ್ ಘಟಕಕ್ಕೆ ಸೇರಿದೆ. **ಶೆಡ್ಯೂಲ್ 'ಸಿ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯು ಒಂದು ಅಪಾರ್ಟ್‌ಮೆಂಟ್ ಯೂನಿಟನ್ನು ಒಳಗೊಂಡಿದೆ, ಅಂದರೆ ಫ್ಲಾಟ್ ನಂ.ಇ-203, ಒಟ್ಟು ವಿಸ್ತೀರ್ಣ1089 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಎರಡನೇ ಮಹಡಿ, ಇ ಬ್ಲಾಕ್‌ನಲ್ಲಿ ಒಳಗೊಂಡಿದೆ ಜೊತೆಗೆ ಒಂದು ಮುಚ್ಚಿದ ಕಾರು ನಿಲ್ಲಿಸುವ ಸ್ಥಳವನ್ನು ತಳ ಮಹಡಿ/ಸ್ಟೇರ್‌ಕೇಸ್/ಸ್ಟಿಲ್ಟ್ ಮಹಡಿಯಲ್ಲಿ ಒಳಗೊಂಡಿದೆ. (ಬಾಲ್ಕನಿಗಳು ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಒಳಗೊಂಡಿದೆ). **ಶೆಡ್ಯೂಲ್ 'ಸಿ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.101, ನೆಲ ಮಹಡಿಯು "Kranthi Enclave" ಎಂದು ಕರೆಯಲ್ಪಡುವ ಕಾಂಪ್ಲೆಕ್ಸ್‌ನಲ್ಲಿ ಒಳಗೊಂಡಿದ್ದು 1450 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ, ಎರಡು ಬೆಡ್‌ರೂಮ್, ಒಂದು ಹಾಲ್, ಅಡುಗೆಮನೆ, ಮೂರು ಬಾಲ್ಕನಿಗಳು, ಎರಡು ಬಾತ್‌ರೂಮ್‌ಗಳು ಜೊತೆಗೆ 290 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿ ಮತ್ತು ಸಹ-ಮಾಲೀಕತ್ವವನ್ನು, ಶೆಡ್ಯೂಲ್ ಭೂಮಿಯಲ್ಲಿ ಒಳಗೊಂಡಿದೆ ಜೊತೆಗೆ ಸಾಮಾನ್ಯ ಪ್ರದೇಶ, ಪ್ಯಾಸೇಜ್‌ಗಳು, ಲಾಬಿಗಳು, ಲಿಫ್ಟ್‌ಗಳು, ಸ್ಟೇರ್‌ಕೇಸ್‌ಗಳು ಮತ್ತು ಇತರ ಪ್ರದೇಶದಲ್ಲಿ ಸಾಮಾನ್ಯ ಬಳಕೆಗಳನ್ನು ಒಳಗೊಂಡಿದೆ.	₹. 45.56	₹. 4.56	₹. 1.00	10.04.2026 ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್‌ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ: ಬ್ಯಾಂಕಿನ ಗಮನಕ್ಕೆ ಬಂದಿಲ್ಲ
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಕೆನರಾ ಬ್ಯಾಂಕ್‌ನ ವೆಬ್‌ಸೈಟ್ **(www.canarabank.com)** ಅಥವಾ **M/s PSB ಅಲೈಯನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್‌ನಲ್ಲಿ ಒದಗಿಸಲಾದ "ಇ-ಹರಾಜು" ಲಿಂಕ್ ಅನ್ನು ನೋಡಿ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು ಮೊಬೈಲ್ ಸಂಖ್ಯೆ: 080-25310066, 7022044933 ಮತ್ತು 903960346** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 01.04.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಫಾರ್ಮ್ A
ಸಾರ್ವಜನಿಕ ಪ್ರಕಟಣೆ
[ಭಾರತೀಯ ದಿವಾಳಿ ಮತ್ತು ದಿವಾಳಿತನ ಮಂಡಳಿಯ (ಸ್ವಯಂಪ್ರೇರಿತ ಲಿಕ್ವಿಡೇಷನ್ ಪ್ರಕ್ರಿಯೆ) ನಿಯಮಗಳು, ೨೦೧೭ ರ ನಿಯಮ ೧೪]
ಸ್ಮಾಲ್ ಸ್ಟ್ರೀಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರರ ಗಮನಕ್ಕಾಗಿ

1	ಕಾರ್ಪೊರೇಟ್ ಸಂಸ್ಥೆಯ	ಸ್ಮಾಲ್ ಸ್ಟ್ರೀಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
2	ಹೆಸರುಕಾರ್ಪೊರೇಟ್ ಸಂಸ್ಥೆಯ ಸಂಸ್ಥಾಪನಾ ದಿನಾಂಕ	21/09/2018
3	ಕಾರ್ಪೊರೇಟ್ ಸಂಸ್ಥೆಯನ್ನು ಸ್ಥಾಪಿಸಿದ / ನೋಂದಾಯಿಸಿದ ಪ್ರಾಧಿಕಾರ	ಆರ್‌ಒಸಿ - ಬೆಂಗಳೂರು
4	ಕಾರ್ಪೊರೇಟ್ ಸಂಸ್ಥೆಯ ಕಾರ್ಪೊರೇಟ್ ಐಡೆಂಟಿಟಿ ಸಂಖ್ಯೆ / ಲಿಮಿಟೆಡ್ ಲಯಬಿಲಿಟಿ ಐಡೆಂಟಿಟಿ ಸಂಖ್ಯೆ	U72900KA2018PTC116751
5	ಕಾರ್ಪೊರೇಟ್ ಸಂಸ್ಥೆಯ ನೋಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿಯ ವಿಳಾಸ (ಯಾವುದಾದರೂ ಇದ್ದರೆ)	1 ನೇ ಮಹಡಿ, ಗೋಪಾಲ ಕೃಷ್ಣ ಕಾಂಪ್ಲೆಕ್ಸ್, #45/3 ರೆಸಿಡೆನ್ಸಿ ರಸ್ತೆ, ಬೆಂಗಳೂರು - 560025, ಕರ್ನಾಟಕ, ಭಾರತ.
6	ಕಾರ್ಪೊರೇಟ್ ಸಂಸ್ಥೆಯ ಲಿಕ್ವಿಡೇಶನ್ ಪ್ರಾರಂಭ ದಿನಾಂಕ	30/03/2026
7	ಲಿಕ್ವಿಡೇಟರ್ ಅವರ ಹೆಸರು, ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ಅಜಯ್ ರಾಜೇಂದ್ರ ಅಬಾದ್ ವಿಳಾಸ: ಕ್ರಮ ಸಂಖ್ಯೆ 6/10/14, 7 ನೇ ಮಹಡಿ, ಕಚೇರಿ ಸಂಖ್ಯೆ ಆ-704, ವಾಂಟೇಜ್ C, ಬವಧಾನ್ ಪೊಲೀಸ್ ಠಾಣೆ ಎದುರು, ಬವಧಾನ್ ಖುರ್ದ್, ಪುಣೆ - 411021. ಇಮೇಲ್: ipajayabad@outlook.com ದೂರವಾಣಿ ಸಂಖ್ಯೆ: +91 9890065176 ನೋಂದಣಿ ಸಂಖ್ಯೆ: IBBI/IPA-001/IP-P-02228/2021-2022/13721
8	ಕ್ಲೇಮ್ ಸಲ್ಲಿಸಲು ಕೊನೆಯ ದಿನಾಂಕ	29/04/2026

ಸ್ಮಾಲ್ ಸ್ಟ್ರೀಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು 30ನೇ ಮಾರ್ಚ್ 2026 ರಂದು ಸ್ವಯಂ ಪ್ರೇರಿತ ಲಿಕ್ವಿಡೇಷನ್ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದು ಈ ಮೂಲಕ ತಿಳಿಸಲಾಗುತ್ತದೆ. ಸ್ಮಾಲ್ ಸ್ಟ್ರೀಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಹಿತಾಸಕ್ತಿದಾರರು 29 ನೇ ಏಪ್ರಿಲ್ 2026 ರಂದು ಅಥವಾ ಅದಕ್ಕೂ ಮೊದಲು ಹೊಂದಿರುವ ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು ಐಟಂ 7 ರಲ್ಲಿ ಉಲ್ಲೇಖಿಸಲಾದ ವಿಳಾಸದಲ್ಲಿರುವ ಲಿಕ್ವಿಡೇಟರ್‌ಗೆ ಸಲ್ಲಿಸಬೇಕು.
ಹಣಕಾಸು ಸಾಲಗಾರರು ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು. ಇತರ ಎಲ್ಲಾ ಹಿತಾಸಕ್ತಿದಾರರು ಕ್ಲೇಮ್‌ಗಳ ಪುರಾವೆಗಳನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದು.
ಸುಳ್ಳು ಅಥವಾ ತಪ್ಪು ದಾರಿಗೆಳೆಯುವ ಕ್ಲೇಮ್ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡಕ್ಕೆ ಗುರಿಪಡಿಸಲಾಗುತ್ತದೆ.

ದಿನಾಂಕ: 30ನೇ ಮಾರ್ಚ್ 2026
ಸ್ಥಳ: ಪುಣೆ

ಅಜಯ್ ರಾಜೇಂದ್ರ ಅಬಾದ್